## ಕರ್ನಾಟಕ ವಿಧಾನ ಪರಿಷತ್
## ನಿಯಮ-330

**ವಿಷಯ:** ಶ್ರೀ ಮರಿತಿಬ್ಬೇಗೌಡ, ವಿಧಾನ ಪರಿಷತ್ತಿನ ಸದಸ್ಯರು ಇವರು ನಿಯಮ-330 ರಡಿ ಸಲ್ಲಿಸಿರುವ ನಿಯಮದ ಮೇರೆಗೆ ಸೂಚನೆ. ಕೋವೀಡ್-19 ರ ಅವಧಿಯ ದಿನಾಂಕ:02-05-2021 ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಕಾಲದಲ್ಲಿ ರೋಗಿಗಳಿಗೆ ಆಕ್ಸಿಜನ್ ಪೂರೈಸದ ಕಾರಣದಿಂದ ಅವಲಂಬಿತ ಕುಟುಂಬಸ್ಥರಿಗೆ ಸೂಕ್ತ ಪರಿಹಾರ ನೀಡದೇ ಇರುವುದರಿಂದ, ಉಂಟಾದ ಗಂಭೀರ ಸಮಸ್ಯೆ ಕುರಿತು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆದಿರುವ ಬಗ್ಗೆ.

**ಸಚಿವರ ಹೇಳಿಕೆ:-**

ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ದಿನಾಂಕ:03.05.2021 ರಂದು ಆಮ್ಲಜನಕ ಕೊರತೆಯಿಂದಾಗಿ ಕೋವಿಡ್-19 ಬಾದಿತ ರೋಗಿಗಳು ಮರಣ ಹೊಂದಿದ್ದಾರೆಂಬ ಆರೋಪದ ತನಿಖೆಗಾಗಿ ಒಳಾಡಳಿತ ಇಲಾಖೆಯು ಅಧಿಸೂಚನೆ ಸಂಖ್ಯೆ: HD 04 PCE 2021 ದಿನಾಂಕ:05.05.2021 ರಂದು ಮಾನ್ಯ ಶ್ರೀ ಬಿ.ಎ.ಪಾಟೀಲ್, ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಏಕಸದಸ್ಯ ತನಿಖಾ ಆಯೋಗ ರಚಿಸಿ ನೇಮಿಸಲಾಗಿದೆ. ಸದರಿ ಏಕಸದಸ್ಯ ತನಿಖಾ ಆಯೋಗವು ಸಲ್ಲಿಸಿದ ವರದಿಯ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಭಿಪ್ರಾಯವನ್ನು ಒದಗಿಸುವಂತೆ ಒಳಾಡಳಿತ ಇಲಾಖೆಯು ಕೋರಿರುತ್ತದೆ. ಈ ಕುರಿತು ಸದರಿ ತನಿಖಾ ವರದಿಯ ಬಗ್ಗೆ ಒಪ್ಪಿಗೆ ಇಲ್ಲದಿರುವ ಅಂಶವನ್ನು ಒಳಾಡಳಿತ ಇಲಾಖೆಗೆ ತಿಳಿಸಲಾಗಿರುತ್ತದೆ.

ಮಾನ್ಯ ಶ್ರೀ ಬಿ.ಎ.ಪಾಟೀಲ್, ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಏಕಸದಸ್ಯ ತನಿಖಾ ಆಯೋಗವು ನೀಡಿರುವ ವರದಿಯ ಬಗ್ಗೆ ಸರ್ಕಾರಕ್ಕೆ ಒಪ್ಪಿಗೆ ಇಲ್ಲದೇ ಇರುವುದರಿಂದ ಹಾಗೂ ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯದ ಹಿನ್ನಲೆಯಲ್ಲಿ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ನೀಡಿರುವ ವರದಿಯಲ್ಲಿನ ಗಂಭೀರವಾದ ಆರೋಪದ ತನಿಖೆಗಾಗಿ ಒಳಾಡಳಿತ ಇಲಾಖೆಯು ಅಧಿಸೂಚನೆ ಸಂಖ್ಯೆ: HD 99 PCE 2023 ದಿನಾಂಕ:25.08.2023 ರಂದು ಮಾನ್ಯ ಶ್ರೀ ಜಾನ್ ಮೈಕಲ್ ಕುನ್ಹಾ, ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಇವರ ನೇತೃತ್ವದಲ್ಲಿ ತನಿಖೆ ನಡೆಸಲು ವಿಚಾರಣಾ ಆಯೋಗವನ್ನು ನೇಮಿಸಲಾಗಿರುತ್ತದೆ. ಅಧಿಸೂಚನೆ ಸಂಖ್ಯೆ: HD 99 PCE 2023 ದಿನಾಂಕ:07.10.2023 ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಇತರೆ ಇಲಾಖೆಗಳ ಅಧೀನಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಸಂಸ್ಥೆಗಳಲ್ಲಿ ಔಷಧ ಆಮ್ಲಜನಕದ ಉಪಕರಣಗಳು, ಸಾಮಾಗ್ರಿಗಳ ಖರೀದಿ, ವಿರತಣೆ, ನಿರ್ವಹಣೆಯಲ್ಲಿ ನಡೆದಿರುವಂತಹ ಅವ್ಯವಹಾರಗಳು ಹಾಗೂ ಲೋಪದೋಷಗಳ ಸಮಗ್ರ ತನಿಖೆಯನ್ನು ಮಾನ್ಯ ಆಯೋಗದ ತನಿಖಾ ವ್ಯಾಪ್ತಿಗೆ ಒಳಪಡಿಸಿರುತ್ತದೆ.

ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021 ರಂದು ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಕಾನೂನು ಬದ್ಧ ವಾರಸುದಾರರಿಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 6435 / 2020 ಮತ್ತು ಇತರೆ ಅರ್ಜಿಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ

150 ಸೀಟ್ R-330
SL No. 10

ನ್ಯಾಯಾಲಯವು ದಿನಾಂಕ: 20.05.2021 ರಂದು ನೀಡಿದ ನಿರ್ದೇಶನದಂತೆ ತಲಾ ರೂ 2,00,000/- ಲಕ್ಷ (ಎರಡು ಲಕ್ಷ ರೂಪಾಯಿಗಳು ಮಾತ್ರ) ದಿನಾಂಕ: 21.05.2021 ರಲ್ಲಿ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಲಾಗಿದೆ.

ಈ ಅರ್ಜಿಯ ವಿಷಯವನ್ನು ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ: 06.07.2021 ರಂದು ಮರು ವಿಚಾರಣೆಗೆ ಕೈಗೆತ್ತಿಕೊಂಡ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್‌ರವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಗಣಿಸಿ ಮಾನ್ಯ ನ್ಯಾಯಾಲಯವು ನೀಡಿದ ನಿರ್ದೇಶನದಂತೆ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021 ರಂದು ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳಲ್ಲಿ ಕೆಳಕಂಡ 13 ಮೃತಪಟ್ಟ ವ್ಯಕ್ತಿಗಳ ಕಾನೂನು ಬದ್ಧ ವಾರಸುದಾರರಿಗೆ ತಲಾ ರೂ.3,00,000/- ಲಕ್ಷ (ಮೂರು ಲಕ್ಷ ರೂಪಾಯಿಗಳು ಮಾತ್ರ) ಪರಿಹಾರವನ್ನು ದಿನಾಂಕ: 15.07.2021 ರಲ್ಲಿ ಜಿಲ್ಲಾಧಿಕಾರಿ ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಲಾಗಿದೆ..

| | |
|---|---|
| 1. | ಶ್ರೀ ಮೋಹನ್ ರಾಜ್ ಮೇಘವತ್ ಬಿನ್ ರಾಜ್‌ನಾಯಕ |
| 2. | ಶ್ರೀಮತಿ ಮಂಜುಳ ಕೋಂ. ಸಿದ್ದನಾಯಕ, ಹೊಸೂರು |
| 3. | ಶ್ರೀ ಮಹದೇವ ಸ್ವಾಮಿ ಮರಿಯಪ್ಪ ಬಿನ್ ಯರಿಯೂರು |
| 4. | ಶ್ರೀಮತಿ ನಾಗಮ್ಮ ಕೋಂ. ಶ್ರೀ ವೀರಭದ್ರನಾಯಕ್ |
| 5. | ಶ್ರೀ ಮಹದೇವ ಸ್ವಾಮಿ ಬಿನ್ ಗುರುಸಿದ್ದಪ್ಪ |
| 6. | ಶ್ರೀ ದೊಡ್ಡಯ್ಯ ಬಿನ್ ಮರಿಸಿದ್ದಯ್ಯ |
| 7. | ಶ್ರೀ ಅಜಯ್ ಕುಮಾರ್ ಬಿನ್. ನಾಗರಾಜಪ್ಪ |
| 8. | ಶ್ರೀ ಸುರೇಂದ್ರ ಬಿನ್. ಸಿದ್ದಯ್ಯ |
| 9. | ಶ್ರೀಮತಿ ಸರೋಜಮ್ಮ ಕೋಂ. ಮಣಿ |
| 10. | ಶ್ರೀ ಸುಮೇಶ್ ಬಿನ್. ಮರಿಸ್ವಾಮಿ |
| 11. | ಶ್ರೀ ಯೋಗೇಶ್‌ನಯ ಬಿನ್. ಕೃಷ್ಣನಯ |
| 12. | ಶ್ರೀ ಶಿವಸ್ವಾಮಿ ಬಿನ್. ಚನ್ನಯ್ಯ |
| 13. | ಶ್ರೀಮತಿ ಮಹದೇವಮ್ಮ ಕೋಂ. ಸೋಮಣ್ಣ |

ಆಕುಕ 98 ಎಂಎಸ್‌ಎ 2023

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.**